## ನಮ್ಮ ದೇಶಕ್ಕೆ ಹೆಮ್ಮೆ ಈ ಜೋಡಿ

‘ಬ್ಯಾಡ್ಮಿಂಟನ್‌ನ ಭಲೇ ಜೋಡಿ’ (ಜುಲೈ 06, ಪ್ರಮೋದ) ಕ್ರೀಡಾ ಲೇಖನದಲ್ಲಿ ಬ್ಯಾಡ್ಮಿಂಟನ್‌ನ ಯುವ ಜೋಡಿಯ ಚೆಂದದ ಪರಿಚಯವಾಗಿದೆ. ಕ್ರೀಡಾಪಟುಗಳಾದ ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಅವರು ಕೂಡಿ ಇಂಡೋನೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಡಬಲ್ಸ್ ಪ್ರಶಸ್ತಿ ಪಡೆದು ಐತಿಹಾಸಿಕ ಸಾಧನೆಗೈದಿರುವುದು ಖುಷಿ ಸಂಗತಿ. ಇವರು ನಮ್ಮ ದೇಶಕ್ಕೆ ಹೆಮ್ಮೆ. ಈ ಇಬ್ಬರು ಕ್ರೀಡಾಪಟುಗಳು ಇನ್ನಷ್ಟು ಎತ್ತರಕ್ಕೇರಿ ದೇಶಕ್ಕೆ ಕೀರ್ತಿಯಾಗಲಿ ಎಂಬ ಹಾರೈಕೆ ನಮ್ಮದು.

—ಕೀರ್ತನ್ ಎಚ್.ಎಸ್., ಮಡಿಕೇರಿ

## ತಂತ್ರಜ್ಞಾನದ ಸಾಧ್ಯತೆಗೆ ನಿದರ್ಶನ

‘ಜೀನೋಬಾಟ್; ಜಗತ್ತಿಗೆ ಎದಿರೇಟು?’ (ಜುಲೈ 06, ಲಕ್ಷ್ಮೀದೇವಿ ಪಾಟೀಲ) ಲೇಖನ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಯ ಹಲವು ಸಾಧ್ಯತೆಗಳಿಗೆ ಒಂದು ಉದಾಹರಣೆಯಂತಿದೆ. ಕೃತಕ ಬುದ್ಧಿಮತ್ತೆ, ಅಣುಜೀವ ವಿಜ್ಞಾನದ ಸಂಯೋಜನೆಯಿಂದ ರೂಪುತಳೆಯಬಲ್ಲ ಜೀನೋಬಾಟ್‌ಗಳ ವೈಜ್ಞಾನಿಕ–ತಾಂತ್ರಿಕ ಮಾಹಿತಿಗಳನ್ನು ಲೇಖಕಿ ಸರಳ ಭಾಷೆಯಲ್ಲಿ ನಿರೂಪಿಸಿದ್ದಾರೆ. ಎಲ್ಲರಿಗೂ ಅರ್ಥವಾಗುವಂತಿದೆ ಲೇಖನ.

— ಸುನಾದ ಎಸ್., ದಾವಣಗೆರೆ



## ನಿಜ ಸಂಗತಿಯ ಪ್ರತಿಬಿಂಬ

‘ಟ್ರೋಲಾಸುರ, ಶ್! ಎಚ್ಚರ...’ (ಜುಲೈ 06, ವಿಶಾಖ ಎನ್.) ಈಗಿನ ಸಂದರ್ಭಕ್ಕೆ ತಕ್ಕ ಲೇಖನ. ನಿಜ. ಕಷ್ಟಪಟ್ಟು ಮೇಲೆ ಬಂದ ಸೆಲೆಬ್ರಿಟಿಗಳಿಗೆ ಟ್ರೋಲರ್‌ಗಳು ಉಪಟಳ ಕೊಡುವುದು ಸರಿಯಲ್ಲ. ಇದಕ್ಕೆ ಉದಾಸೀನವೇ ಮದ್ದಾಗಬೇಕು. ಟ್ರೋಲರ್‌ಗಳು ಯಾವತ್ತಿಗೂ ವೈಯಕ್ತಿಕ ವ್ಯಂಗ್ಯಕ್ಕಿಳಿಯಬಾರದದೆಂಬುದು ನನ್ನ ಅಭಿಮತ. ನಿಂದನೆ, ಕುಹಕದ ಟ್ರೋಲ್‌ಗಳಿಂದ ಎಷ್ಟೋ ಜನರ ಜೀವನವೇ ಹಾಳಾಗಿದೆ. ಆದರೆ ತುಂಬಾ ಬೇಗ ಜನಪ್ರಿಯ ಆಗಬೇಕೆಂದು ಸಾಮಾಜಿಕ ಜಾಲತಾಣದಲ್ಲಿ ಏನೇನೋ ಮಾಡಲು ಹೋಗುವವರು ಈ ಟ್ರೋಲರ್‌ಗಳಿಗೆ ಅಂಜಿಯಾದರೂ ಸುಮ್ಮನಿರುತ್ತಾರೆ ಎಂಬುದು ಉತ್ಪ್ರೇಕ್ಷೆಯಲ್ಲ. ಟ್ರೋಲರ್ ಲೇಖನದ ಚಿತ್ರವಿನ್ಯಾಸ ಟ್ರೋಲ್ಸ್ ರಾಕ್ಷಸತನದ ಹಾವಳಿಯ ಪ್ರತಿಬಿಂಬದಂತಿತ್ತು.

— ಸುಮಂತ್ ಎಸ್.ಪಿ. ಸಿದ್ದಾಪುರ

## ಉದಾಸೀನವೇ ತಕ್ಕ ಮದ್ದು

ಟ್ರೋಲಾಸುರನ ಕುರಿತ ಲೇಖನ ಜಾಗೃತಿ ಮೂಡಿಸುವಂತಿದೆ. ಲೈಕ್‌ಗಳಿಗೆ ಹಿಗ್ಗದೆ ನಿಂದನೆಗೆ ಕುಗ್ಗದೆ ಸಮಾಜದಲ್ಲಿ ಬಾಳಬೇಕಯ್ಯ ಎಂಬುದನ್ನು ಹೊಸ ರೀತಿ ಹೇಳಿದಂತಿದೆ. ಕೆಲವರು ಪರರನ್ನು ಅನವಶ್ಯಕವಾಗಿ ನಿಂದಿಸಿ ಸಂತೋಷಪಡುವರು. ಅವರು ದುಃಖಿಸುತ್ತಿದ್ದಾರೆ ಎಂದರೆ, ತಮ್ಮ ಟ್ರೋಲ್‌ಗೆ ಉತ್ತಮ ಪ್ರತಿಕ್ರಿಯೆ ಬಂದಿದೆಯೆಂದು ಮತ್ತಷ್ಟು ಮಂದಿಯನ್ನು ಆರಿಸಿಕೊಳ್ಳುತ್ತಾರೆ. ಇದರಲ್ಲಿ ಸೆಲೆಬ್ರಿಟಿಗಳ ಪಾಲು ಹೆಚ್ಚು. ಡಾ. ಪಲ್ಲವಿ ಸುಧೀರ್ ಉವಾಚದಂತೆ ಟ್ರೋಲ್‌ಗೆ ಉದಾಸೀನವೇ ಉಪಾಯವೆಂದು ಚೆನ್ನಾಗಿ ತಿಳಿಸಿದ್ದಾರೆ. ಆದರೆ ಟ್ರೋಲ್‌ನಲ್ಲಿ ನಾವು ತಿದ್ದಿಕೊಳ್ಳುವ ಅಂಶವಿದ್ದರೆ ಖಂಡಿತವಾಗಿ ಸ್ವೀಕರಿಸಬೇಕು. ಅನವಶ್ಯಕವಾಗಿ ಟೀಕೆಗೆ ಗುರಿ ಮಾಡಿದ್ದರೆ ನಿರ್ಲಕ್ಷಿಸಬೇಕು. ಏನಂತೀರಾ?

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು



## ಅಚ್ಚರಿ ತಂದ ಬದಲಾವಣೆ

‘ಕಲ್ಲರಳಿ ಹೂವಾಗಿ’ (ಜುಲೈ 06, ವಸುಮತಿ ಉಡುಪ) ಕಥೆ ಚೆನ್ನಾಗಿದೆ. ಮನೆಕೆಲಸದಾಕೆ ಚಂದ್ರಿಯ ಬುದ್ಧಿಮತ್ತೆಯಲ್ಲಾದ ಬದಲಾವಣೆ ಅಚ್ಚರಿಗೊಳಿಸುತ್ತದೆ. ಅದು ತುಸು ಅತಿರಂಜಿತ ಎನಿಸಿದರೂ ಬಹಳ ದಿನಗಳ ನಂತರ ಒಂದೊಳ್ಳೆಯ ಕಥೆ ಓದಿದ ಸಾರ್ಥಕತೆ ಉಂಟಾಯಿತು.

—ರವಿಪ್ರಕಾಶ್

## ಅಮೂಲ್ಯ ಸಸ್ಯಸಂಪತ್ತಿನ ಪರಿಚಯ

ಲೇಖಕಿ ವಿನು ಗಂಗೆಯವರು ‘ಮರಗಳ ಕಥೆ’ ಅಂಕಣದಲ್ಲಿ ನಮಗೆ ತಿಳಿಯದ, ಕಳೆದುಹೋಗಿರುವ, ಅಪರೂಪವಾದ ಅಮೂಲ್ಯ ವನ/ಸಸ್ಯ ಸಂಪತ್ತನ್ನು ಓದುಗರಿಗೆ ಪರಿಚಯಿಸುತ್ತಿರುವ ಕಾರ್ಯ ಶ್ಲಾಘನೀಯ.

—ಎಸ್. ಸುಧೀಂದ್ರ, ಬೆಂಗಳೂರು

## ಸ್ಮಾರ್ಟ್ ಆಗಲೇಬೇಕು

‘ಬನ್ನಿ, ಒಂಚೂರು ಸ್ಮಾರ್ಟ್ ಆಗೋಣ’ (ಜೂನ್ 29, ಡಾ. ಲಕ್ಷ್ಮಣ ವಿ.ಎ.) ಲೇಖನ ಬಹಳ ಅರ್ಥಪೂರ್ಣವಾಗಿದೆ. ಈ ಜಗತ್ತು ಬಯಸುವುದು ಕಠಿಣ ಶ್ರಮವಲ್ಲ, ಸ್ಮಾರ್ಟ್ ಕಾರ್ಯವನ್ನು ಎಂಬುದಕ್ಕೆ ಲೇಖಕರು ಸೂಕ್ತ ಉದಾಹರಣೆಗಳನ್ನು ಕೊಟ್ಟು ಬರೆದಿದ್ದಾರೆ. ಇಂದಿನ ಹೆಂಗಳೆಯರು ಕೂಡ ಇದನ್ನೇ ಬಯಸುತ್ತಿರುವುದು.

—ಗಾಯತ್ರಿ ಸ್ವಾಮಿ

## ಮಾದರಿಯಾಗಲಿ ಕಥೆ

‘ಜೊತೆ ಜೊತೆಯಲಿ’ (ಜೂನ್ 29, ಸಿ.ಎನ್. ಮುಕ್ತಾ) ಕಥೆ ಇಂದಿನ ಸಮಾಜಕ್ಕೆ ಪ್ರಶಸ್ತವಾಗಿದೆ. ಗಂಡ ಹೆಂಡತಿ ಒಬ್ಬರಿಗೊಬ್ಬರು ಹೊಂದಿಕೊಂಡು ಜೀವನ ನಡೆಸಬೇಕು. ‘ವೃದ್ಧಾಪ್ಯ ಶಾಪ’ ಎಂದು ಹೇಳುತ್ತಾರೆ. ಆದರೆ ಅದು ವರ ಎಂದು ನನಗನ್ನಿಸುತ್ತದೆ. ಇಳಿ ವಯಸ್ಸಿನಲ್ಲಿ ಸಂಗಾತಿಗಳು, ಹಿಂದೆ ಮಾಡಿದ ತಪ್ಪುಗಳನ್ನು ಮರೆತು, ಕ್ಷಮಿಸಿ ಒಬ್ಬರಿಗೊಬ್ಬರು ಆಸರೆಯಾಗಿ ನಿಲ್ಲಬೇಕು. ಕಥೆಯಲ್ಲಿ ಬರುವ ರಾವ್ ದಂಪತಿ ಮನಸ್ಸು ಬದಲಿಸಿ, ಆಧುನಿಕ ವ್ಯವಸ್ಥೆಯಲ್ಲಿ ಸುಖಮಯ ಜೀವನ ನಡೆಸುವ ಪರಿ ಇತರರಿಗೂ ಮಾದರಿಯಾಗಬೇಕಿದೆ.

—ಪಿ.ಹೆಚ್. ಪಾಟೀಲ್, ರಾಣೆಬೆನ್ನೂರ



## ಮುದ ತಂದ ಚಾರಣ ಕಥನ

‘ಕುಮಾರ ಪರ್ವತದ ಬೆಟ್ಟ ಕಣಿವೆಗಳಲ್ಲಿ...’ (ಜುಲೈ 06, ಎನ್.ಆರ್. ತಿಪ್ಪೇಸ್ವಾಮಿ ಚಿಕ್ಕಹಳ್ಳಿ) ಚಾರಣದ ಬರಹ ಮನಸ್ಸಿಗೆ ಮುದ ನೀಡಿತು. ಓದಿಸಿಕೊಂಡು ಹೋಗುತ್ತಾ ಚಾರಣಿಗರ ಪರಿಚಯ ಮಾಡಿಕೊಟ್ಟಿತು. ಕುಮಾರ ಪರ್ವತದ ಅಗಾಧ ಚೆಲುವನ್ನು, ಅದರಲ್ಲಡಗಿರುವ ಮೌನವನ್ನು ಅಷ್ಟೇ ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ ಲೇಖಕರು. ಇದರೊಂದಿಗೆ, ವಸುಮತಿ ಉಡುಪ ಅವರ ‘ಕಲ್ಲರಳಿ ಹೂವಾಗಿ’ ಕಥೆ ಚಂದ್ರಿಯ ಬದುಕಿನ ಅನಾವರಣ ವ್ಯಕ್ತಿತ್ವದ ನೋಟದಲ್ಲಿನ ಬೇರೆ ಬೇರೆ ಮುಖಗಳನ್ನು ತೆರೆದಿಟ್ಟಿತು.

—ಮಾರುತಿ ಗೋಪಿಕುಂಟೆ, ತುಮಕೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in